# ಮಗುವಿನ ಬೆಳವಣಿಗೆಗೆ ಹೀಗಿರಲಿ ಆಟಿಕೆ

‘ಮಕ್ಕಳಿರಲವ್ವ ಮನೆತುಂಬ’ ಎನ್ನುತ್ತಾರೆ ನಮ್ಮ ಜನಪದರು. ಕಂದಮ್ಮಗಳ ತೊದಲು ನುಡಿ, ಪುಟ್ಟ ಹೆಜ್ಜೆ, ಕಣ್ಣ ಹೊಳಪು – ಇವೆಲ್ಲವೂ ಮನೆಮಂದಿಯ ಬದುಕಿನ ಸೊಗಸು–ಉಲ್ಲಾಸ ಹೆಚ್ಚಿಸಬಲ್ಲವು. ದೊಡ್ಡವರ ಕಣ್ಣಿಗೆ ಮಕ್ಕಳೇನೋ ಜೀವಂತ ಆಟಿಕೆಗಳಂತೆ ಕಾಣಿಸಬಹುದು. ಆದರೆ, ಮಕ್ಕಳ ಕಣ್ಣಿಗೆ? ಮಗುವಿನ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯ ಮಟ್ಟಕ್ಕೆ ಸರಿಯಾಗಿ ಅವರ ಕೈಗೆ ಆಟಿಕೆ ಕೊಡಬೇಕು. ಯಾವ ವಯಸ್ಸಿನ ಮಗುವಿಗೆ ಎಂಥ ಆಟಿಕೆ ಕೊಡಬಹುದು ಎನ್ನುವುದರ ಮಾಹಿತಿ ಇಲ್ಲಿದೆ.

ಸಂಗ್ರಹ: ಸುಕೃತ ಎಸ್.

**0–1 ತಿಂಗಳು:** ಈ ಸಮಯದಲ್ಲಿ ಮಗುವಿಗೆ ನಿಮ್ಮ ಮಡಿಲ ಬಿಸಿ ತಾಕುವಂತಿರಲಿ. ಇದರಿಂದ ಮಗು ನಿಮ್ಮ ಮೇಲೆ ನಂಬಿಕೆ ಬೆಳೆಸಿಕೊಳ್ಳುತ್ತದೆ ಮತ್ತು ಹೊಸ ಜಗತ್ತಿಗೆ ಬೇಗನೆ ಒಗ್ಗಿಕೊಳ್ಳುತ್ತದೆ. ಆಟಿಕೆ: ತೊಟ್ಟಿಲಿಗೆ ಸಿಗಿಸುವ ಆಟಿಕೆ. ಉದಾ: ಬಟ್ಟೆ, ಮೆತ್ತನೆ ರಬ್ಬರಿನಿಂದ ಮಾಡಿದ ಬೊಂಬೆ.



**1–3 ತಿಂಗಳು:** ತನ್ನ ಸುತ್ತಮುತ್ತಲ ಚಲನಶೀಲ ವಸ್ತುಗಳನ್ನು ಗಮನಿಸುವ ಹಂತಕ್ಕೆ ಮಗು ಬಂದಿರುತ್ತದೆ. ಕೆಲವು ಶಬ್ದಗಳ ಗ್ರಹಿಸತೊಡಗುತ್ತದೆ. ಆಟಿಕೆ: ಶಬ್ದ ಹೊರಡಿಸುವ ಆಟಿಕೆಗಳು ಸೂಕ್ತ.



**3–6 ತಿಂಗಳು:** ಈ ತಿಂಗಳುಗಳಲ್ಲಿ ಮಗು ವಸ್ತುಗಳನ್ನು ಗ್ರಹಿಸುತ್ತವೆ. ಕ್ರಿಯೆ–ಪ್ರತಿಕ್ರಿಯೆಗಳನ್ನು ಕಲಿತಿರುತ್ತವೆ. ಆಟಿಕೆ: ಮೃದು, ಸಣ್ಣ ಮತ್ತು ಕಡಿಮೆ ತೂಕದ ಆಟಿಕೆಗಳು.



**6–8 ತಿಂಗಳು:** ಮೆಲ್ಲನೆ ತೆವಳುವುದಕ್ಕೆ ಪ್ರಾರಂಭಿಸುತ್ತವೆ. ಹೊಸದನ್ನು ಕಂಡುಹಿಡಿಯುವ ತವಕ. ಆಟಿಕೆ: ಡ್ರಮ್‌ಗಳು, ಕ್ಯೂಬ್‌ಗಳು, ಬೇರೆ ಬೇರೆ ಕೋನದ ಆಟಿಕೆ.



**8–12 ತಿಂಗಳು:** ಮಕ್ಕಳದು ಪುಟ್ಟ ಹೆಜ್ಜೆ ಇಟ್ಟು ನಡೆಯುವ ಹವಣಿಕೆ. ನಿಮ್ಮ ಕೈಯಲ್ಲಿ ಏನಾದರೂ ಇದ್ದರೆ ಕಸಿದುಕೊಳ್ಳುತ್ತವೆ. ಆಟಿಕೆ: ಗೊಂಬೆಗಳು, ದೂಡುವ–ಚಕ್ರ ಇರುವ ಆಟಿಕೆಗಳು.



**12–15 ತಿಂಗಳು:** ಮಗುವು ಅವಲಂಬನೆಯಿಂದ ಸ್ವಾವಲಂಬನೆ ಕಡೆಗೆ ಬರುತ್ತಿರುತ್ತದೆ. ದಾಪುಗಾಲುಗಳನ್ನು ಬಹಳ ಆತ್ಮವಿಶ್ವಾಸದಿಂದ ಇಡಲು ಪ್ರಾರಂಭಿಸುತ್ತದೆ. ಆಟಿಕೆ: ತಳ್ಳಿಕೊಂಡು ಆಡುವ ಆಟಿಕೆ. ನಿಮ್ಮ ಮಗುವಿನ ಭಾರವನ್ನು ಹೊತ್ತು ಸಾಗುವ ಆಟಿಕೆ ಗಾಡಿಗಳನ್ನು ಕೊಡಿಸಬಹುದು.



**15–18 ತಿಂಗಳು:** ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ತಂತ್ರಗಾರಿಕೆಯನ್ನು ಈ ಹಂತದಲ್ಲಿ ಮಗು ಬೆಳೆಸಿಕೊಳ್ಳುತ್ತದೆ. ವಸ್ತುಗಳನ್ನು ಎಸೆಯುತ್ತದೆ, ತಳ್ಳುತ್ತದೆ. ಆಟಿಕೆ: ಮಕ್ಕಳು ಕೂತು ಆಡುವ ಬೈಕು, ಕಾರು, ಮನೆ–ಬ್ರಿಕ್ಸ್‌ಗಳನ್ನು ಕಟ್ಟುವ ಆಟಿಕೆಗಳು, ಹೊರಾಂಗಣ ಆಟಗಳು.



**18–21 ತಿಂಗಳು:** ಮಗುವಿನ ತೊದಲು ನುಡಿಗಳು ನಮ್ಮನ್ನು ಮುದಗೊಳಿಸುತ್ತವೆ. ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಹೆಚ್ಚು ಶಕ್ತಿಯನ್ನು ಅದು ಹೊಂದುತ್ತದೆ. ಆಟಿಕೆ: ಒಗಟು ಬಿಡಿಸುವ ಆಟಿಕೆ, ಮಾತನಾಡುವ ಗೊಂಬೆಗಳು





**21–24 ತಿಂಗಳು:** ಮಗು ಈಗ ಸ್ವತಂತ್ರವಾಗಿ, ಉತ್ಸಾಹದಿಂದ ಆಟ ಆಡಲು ಕಲಿತಿರುತ್ತದೆ. ಆಟಿಕೆ: ಕ್ರಯಾನ್ಸ್, ಅಡುಗೆ ಆಟಿಕೆ.